ಸಾಕ್ಷಿಯನ್ನು ದಿನಾಂಕ 24.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಂ.ಆರ್. ಎಸ್ ವಕೀಲರಿಂದ

ನಿಪಿ-1 ಅನ್ನು ಬ್ಯಾಂಕ್ ಗೆ ನಗಧೀಕರಿಸಲು ಸಲ್ಲಿಸಿದ ದಿನಾಂಕ ನೆನಪಿರುವುದಿಲ್ಲ. ಬ್ಯಾಂಕಿನವರು ಚೆಕ್ ಅಮಾನ್ಯಗೊಂಡಿರುವ ಬಗ್ಗೆ ಹಿಂಬರಹ ನೀಡಿರುತ್ತಾರೆ. ಬ್ಯಾಂಕಿನವರ ಹಿಂಬರಹದಲ್ಲಿ Account Blocked Situation Covered in 21-25 ಎಂದು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಬ್ಯಾಂಕ್ ಹಿಂಬರವನ್ನು ನೇರವಾಗಿ ನಮ್ಮ ವಕೀಲರಿಗೆ ನೀಡಿದ್ದೆ. ನಮ್ಮ ವಕೀಲರು ಬ್ಯಾಂಕ್ ಹಿಂಬರಹ ನೋಡಿ ಆರೋಪಿಯಿಂದ ಬೇರೆ ಚೆಕ್ ತೆಗೆದುಕೊಳ್ಳಿ ಎಂದು ಹೇಳಲಿಲ್ಲ. ನಾನು ರವಿ ಎನ್ನುವವರ ವಿರುದ್ಧ ದಾಖಲಿಸಿರುವ ಚೆಕ್ ಪ್ರಕರಣದಲ್ಲಿ ಆರೋಪಿ ಖುಲಾಸೆ ಗೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ರವಿ ಅವರ ವಿರುದ್ಧ ಮುಕ್ತಾಯಗೊಂಡ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಆರೋಪಿ ಭದ್ರತೆಗಾಗಿ ನೀಡಿದ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಿಂದ 3 ರ ಅಡಿಯಲ್ಲಿ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ.